## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 518/2023 **RW**-1

**ದಿಃ19.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀ ಟಿವಿಎಸರವರಿಂದ**

ನಾನು ಕಳೆದ ಮೂರು ವರ್ಷಗಳಿಂದ ಕಾನೂನು ವ್ಯವಸ್ಥಾಪಕನೆಂದು 2 ನೇ ಎದುರುದಾರರ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಗಾಡಿ ಪಾರ್ಕಿಂಗ್ ಮಾಡಿದ್ದು ಕಾನೂನು ಬಾಹಿರಾ ಎಂದರೆ ಸಾಕ್ಷಿ ರಸ್ತೆಯ ಪಕ್ಕಕ್ಕೆ ನಿಲ್ಲಿಸಿದ್ದರು ಎಂದು ನುಡಿಯುತ್ತಾರೆ. ಜೆಸಿಬಿ ವಾಹನ ಹೆಚ್.ಜಿ.ವಿ ವಾಹನ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಡಿವೈಡ್ಡುರ ಇರಲಿಲ್ಲ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಪ್ರಕರಣವನ್ನು ತಡವಾಗಿ ಸಲ್ಲಿಸಿದ್ದೇವೆಂದು ಹೇಳಿದ್ದು ಅದನ್ನು ಪರಿಹಾರ ಕೊಡವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಆ ರೀತಿ ಹೇಳಿರುತ್ತೇನೆಂದರೆ ಸರಿಯಲ್ಲ. ನಮ್ಮ ಕಂಪನಿ ವತಿಯಿಂದ Internal investigation officer ಇರುತ್ತಾರೆಂದರೆ ಸರಿ. ಅವರು ಖುದ್ದಾಗಿ ಅಪಘಾತದ ಸ್ಥಳಕ್ಕೆ ಹೋಗಿ ತನಿಖೆ ಮಾಡಿದ್ದಾರಾ ಎಂದರೆ ಸಾಕ್ಷಿ ದಾಖಲೆಗಳನ್ನು ಸಂಗ್ರಹಿಸಿರುತ್ತಾರೆ ಎನ್ನುತ್ತಾರೆ. ಅದೇ ರೀತಿ 1 ನೇ ಎದುರುದಾರರು ಅಪಘಾತದ ವಿಷಯವನ್ನು ನಮಗೆ ಹೇಳಿಲ್ಲ ಎನ್ನುತ್ತಾರೆ. ಯಾವ ವಾಹನದ ತಪ್ಪು ಇದೆ ಎಂದು ತನಿಖೆ ಮಾಡಿದ್ದೀರಾ ಎಂದರೆ ಸಾಕ್ಷಿ ಬೇರೆ ವಾಹನದ ತಪ್ಪು ಇದೆ ಎಂದು ಹೇಳುತ್ತಾರೆ. petitioner No.1 (c) ಇವರಿಗೆ 30 ಸಾವಿರ ರೂಪಾಯಿ ಸಂಬಳ ಇಲ್ಲದಿದ್ದರು ಕೂಡಾ ಇದೆ ಎಂದು ನಾನು ಸುಳ್ಳು ಹೇಳಿದ್ದೇನೆಂದರೆ ಸಾಕ್ಷಿ ನಾನು ಆ ರೀತಿ ಹೇಳಿಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ವಿಷಯಗಳನ್ನು ಕೇವಲ ಪರಿಹಾರ ಕೊಡಬೇಕಾಗುತ್ತದೆ ಎಂಬುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಹೇಳಿರುತ್ತೇನೆಂದರೆ ಸರಿಯಲ್ಲ. ಅಪಘಾತದಲ್ಲಿ ಜೆಸಿಬಿ ವಾಹನದ ಚಾಲಕನ ತಪ್ಪು ಇದ್ದರು ಕೂಡಾ ಆತನ ತಪ್ಪು ಇಲ್ಲ ಎಂದು ಪರಿಹಾರ ಕೊಡವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ .ಸರಿಯಲ್ಲ

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ